International Journal of Kannada Research
www.kannadajournal.com

ISSN: 2454–5813
IJKR 2019; 5(1): 87-92
© 2019 IJKR
www.kannadajournal.com
Received: 27-11-2018
Accepted: 29-12-2018

**ಜಗದೀಶ.ಎಂ**
ಸಂಶೋಧನ ವಿದ್ಯಾರ್ಥಿ, ಮಾರ್ಗದರ್ಶಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

**ಡಾ. ನಾಗರಾಜ.ಎಸ್.**
ಸಂಶೋಧನ ಮಾರ್ಗದರ್ಶಕರು, ಮಾರ್ಗದರ್ಶಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

**Correspondence**
**ಜಗದೀಶ.ಎಂ**
ಸಂಶೋಧನ ವಿದ್ಯಾರ್ಥಿ, ಮಾರ್ಗದರ್ಶಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

# ಲಿಂಗಾಯತರಲ್ಲಿ ಸಾಮಾಜಿಕ ಬದಲಾವಣೆ – ಒಂದು ಸಮಾಜಶಾಸ್ತ್ರೀಯ ಅಧ್ಯಯನ

**ಜಗದೀಶ.ಎಂ, ಡಾ. ನಾಗರಾಜ.ಎಸ್.**

**ಪೀಠಿಕೆ**

ಕರ್ನಾಟಕ ರಾಜ್ಯದಲ್ಲಿನ ಲಿಂಗಾಯತ ಸಮುದಾಯದ ಜೀವನ ಕ್ರಮದಲ್ಲಿ ಕಾಲಾಂತರದಲ್ಲಿ ಆದ ಸಾಮಾಜಿಕ ಬದಲಾವಣೆಗಳನ್ನು ದಾಖಲಿಸುವುದೇ ಈ ಪ್ರಸ್ತಾವನೆಯ ಉದ್ದೇಶ. ಲಿಂಗಾಯತ ಸಮುದಾಯ ಕರ್ನಾಟಕದಲ್ಲಿ ಸಾಮಾಜಿಕವಾಗಿ ಪ್ರಾಬಲ್ಯವನ್ನು ಹೊಂದಿರುವ ಪ್ರಮುಖ ಸಮುದಾಯಗಳಲ್ಲಿ ಅತಿ ಮುಖ್ಯವಾದ ಸಮುದಾಯವಾಗಿರುವುದರಿಂದ ಅದರ ಕಾಲಾನುಗತ ಸಾಮಾಜಿಕ ಬದಲಾವಣೆಯೇ ಈ ಅಧ್ಯಯನದ ವಸ್ತು. ಏಕೆಂದರೆ ರಾಜ್ಯದ ಸಾಮಾಜಿಕ ಮತ್ತು ರಾಜಕೀಯ ಚಿತ್ರಣವನ್ನು ಬದಲಿಸುವ ಶಕ್ತಿಯಾಗಿ ಸಮಕಾಲೀನ ಪರಿಸ್ಥಿತಿಯಲ್ಲಿ ಈ ಸಮುದಾಯ ಗುರುತಿಸಿಕೊಂಡಿದೆ.

ಬದಲಾವಣೆ ಪ್ರಕೃತಿ ನಿಯಮ. ಇಂದು ಇದ್ದದ್ದು ನಾಳೆಯ ದಿನ ಬದಲಾವಣೆ ಯಾಗಿರುತ್ತದೆ. ಸಾಮಾಜಿಕ ವಿನ್ಯಾಸವು ಕೂಡ ಸದಾ ಬದಲಾವಣೆಗೆ ತೆರೆದುಕೊಂಡ ಅಂಶ. "ಸಮಾಜ ತನ್ನ ಸ್ಥಿರತೆ ಮತ್ತು ಚಲನಶೀಲತೆಯ ಗುಣಲಕ್ಷಣಗಳನ್ನು ಹೊಂದಿದ್ದು ಅದರ ಅಂಶಗಳು ಸದಾ ಬದಲಾವಣೆಯಾಗುತ್ತಿದ್ದರೂ ವ್ಯಕ್ತಿಗತವಾಗಿ ಪ್ರತಿಯೊಬ್ಬನು ಅದರ ಸ್ಥಿರತೆಗಾಗಿ ಹಂಬಲಿಸುತ್ತಾನೆ". ಎಂದು ಆಗಸ್ಟ್‌ಕಾಮ್ಟೆ ಅಭಿಪ್ರಾಯ ಪಡುತ್ತಾರೆ.

ಬದಲಾವಣೆ ಎನ್ನುವ ಪದ ಒಂದು ನಿರ್ದಿಷ್ಟ ಅವಧಿಯಲ್ಲಿ ಗಮನಿಸಬಹುದಾದ ವ್ಯತ್ಯಾಸಗಳನ್ನು ತಿಳಿಸುವುದಾಗಿದೆ. ಆದ್ದರಿಂದ ಸಾಮಾಜಿಕ ಬದಲಾವಣೆ ಎಂದರೆ ಯಾವುದೇ ಕಾಲಘಟ್ಟದಲ್ಲಿ ಸಾಮಾಜಿಕ ಪ್ರಕ್ರಿಯೆಯಲ್ಲಿ ಗಣನೀಯವಾದ ವ್ಯತ್ಯಾಸಗಳನ್ನು ದಾಖಲಿಸುವುದು.

ವಿವಿಧ ರಾಜ್ಯಗಳಲ್ಲಿ ವಿವಿಧ ಸಮುದಾಯಗಳು ಪ್ರಬಲ ಪ್ರಮುಖ ಸಮುದಾಯಗಳಾಗಿ ಪ್ರಾಬಲ್ಯತೆಯಿಂದ ಮೆರೆಯುತ್ತಿವೆ. ಮಹಾರಾಷ್ಟ್ರದಲ್ಲಿ ಮರಾಠರು, ಕೇರಳದಲ್ಲಿ ನಾಯರ್‌ಗಳು, ಆಂಧ್ರಪ್ರದೇಶದಲ್ಲಿ ರೆಡ್ಡಿ ಮತ್ತು ಕಮ್ಮಾ ಸಮುದಾಯಗಳು, ಗುಜರಾತಿನಲ್ಲಿ ಕ್ಷತ್ರಿಯರು, ಹರಿಯಾಣ ಮತ್ತು ಪಶ್ಚಿಮ ಉತ್ತರ ಪ್ರದೇಶದಲ್ಲಿ ಜಾಟರು, ಬಿಹಾರ ಮತ್ತು ಮಧ್ಯಉತ್ತರ ಪ್ರದೇಶದಲ್ಲಿ ಯಾದವರು, ಪಂಜಾಬಿನಲ್ಲಿ ಸಿಖ್ಖರು, ಜಮ್ಮು ಮತ್ತು ಕಾಶ್ಮೀರದಲ್ಲಿ ಮುಸ್ಲಿಮರು ಹಾಗೂ ಮೇಘಾಲಯ ಮಿಜೋರಾಂ ಮತ್ತು ನಾಗಲ್ಯಾಂಡ್‌ಗಳಲ್ಲಿ ಕ್ರಿಶ್ಚಿಯನ್ ಸಮುದಾಯ ಪ್ರಬಲ ಸಮುದಾಯಗಳಾಗಿ ಆಯಾ ರಾಜ್ಯಗಳ ಸಾಮಾಜಿಕ, ರಾಜಕೀಯ, ಸ್ಥಿತಿಗತಿಗಳ ಮೇಲೆ ತಮ್ಮ ಹಿಡಿತವನ್ನು ಸಾಧಿಸಿವೆ. ಅದೇ ರೀತಿ ಕರ್ನಾಟಕದಲ್ಲಿ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳು ಸಾಮಾಜಿಕ ಮತ್ತು ರಾಜಕೀಯವಾಗಿ ಪ್ರಬಲ ಶಕ್ತಿಗಳಾಗಿ ಹೊರಹೊಮ್ಮಿವೆ.

ಈ ರೀತಿಯ ಸಮುದಾಯಗಳ ಸಾಮಾಜಿಕ ಬದಲಾವಣೆಯ ಆಧುನೀಕರಣದ ಬಗ್ಗೆ ಹಲವಾರು ದೇಶಿಯ ಮತ್ತು ಪಾಶ್ಚಿಮಾತ್ಯ ಸಮಾಜಶಾಸ್ತ್ರಜ್ಞರು ಅಧ್ಯಯನ ನಡೆಸಿ ಸಮುದಾಯಗಳ ಬೆಳವಣಿಗೆಯ ಮೇಲೆ ಬೆಳಕು ಚೆಲ್ಲಿದ್ದಾರೆ. ಅವರಲ್ಲಿ ಜಿ.ಎಸ್.ಘುರ್ಯೆ, ಎಂ.ಎನ್.ಶ್ರೀನಿವಾಸ್, ಆಂದ್ರಬೆತ್ತಲೆ, ರಜನಿಕೊಠಾರಿ, ಎಂ.ಎಸ್.ಎ.ರಾವ್, ಮಿಲ್ಟನ್‌ಸಿಂಗರ್, ರೂಡಾಲ್ಫ್, ಯೋಗೇಂದ್ರಸಿಂಗ್, ಮುಂತಾದವರು ಅಗ್ರಗಣ್ಯರು. ಅಂತಹ ಅಧ್ಯಯನಗಳು ರಾಷ್ಟ್ರೀಯ ತಳಹದಿಯ ಸಂಖ್ಯಾಬಲ, ಆರ್ಥಿಕ ಮೂಲಗಳು, ದೃಢನಾಯಕತ್ವ, ಸಾಮಾಜಿಕ ಕಳಕಳಿ, ದೃಢತೆ, ಮತ್ತು ಆತ್ಮವಿಶ್ವಾಸವನ್ನು ಹೊಂದಿರುವ ಅಧ್ಯಯನಗಳಾಗಿವೆ. ಇಂತಹ ಅಧ್ಯಯನಗಳೇ ನನ್ನನ್ನು ತುಮಕೂರು ಜಿಲ್ಲೆಯಲ್ಲಿನ 'ಲಿಂಗಾಯತರಲ್ಲಿ ಸಾಮಾಜಿಕ ಬದಲಾವಣೆ' ಒಂದು ಸಮಾಜಶಾಸ್ತ್ರೀಯ ಅಧ್ಯಯನ ಎಂಬ

ಮಹಾಪ್ರಬಂಧವನ್ನು ಕೈಗೆತ್ತಿಕೊಳ್ಳಲು ಪ್ರೇರಣೆ.

ಜೋನ್ಸ್ ಪ್ರಕಾರ "ಸಾಮಾಜಿಕ ಬದಲಾವಣೆ ಎನ್ನುವ ಪದ ಸಾಮಾಜಿಕ ವಿಧಾನಗಳಲ್ಲಿ, ಸಾಮಾಜಿಕ ವಿನ್ಯಾಸಗಳಲ್ಲಿ, ಸಾಮಾಜಿಕ ಚರ್ಚೆಗಳಲ್ಲಿ ಅಥವಾ ಸಾಮಾಜಿಕ ಸಂಘಟನೆಗಳಲ್ಲಿ ಆಗಬಹುದಾದ ಮಾರ್ಪಾಡುಗಳು ಅಥವಾ ಏರಿಳಿತಗಳನ್ನು ವಿವರಿಸುವುದೇ ಆಗಿದೆ".

ಗಿಲಿನ್ ಮತ್ತು ಗಿಲಿನ್ ರವರ ಪ್ರಕಾರ "ಸಾಮಾಜಿಕ ಬದಲಾವಣೆ ಎನ್ನುವುದು ನಾವು ಒಪ್ಪಿಕೊಂಡ ಜೀವನ ವಿಧಾನಗಳಲ್ಲಿ ಆಗುವ ವ್ಯತ್ಯಾಸಗಳು. ಅದು ಭೌಗೋಳಿಕ ಪರಿವರ್ತನೆಯಿಂದ ಸಾಂಸ್ಕೃತಿಕ ಸಾಧನದಿಂದ ಜನಸಂಖ್ಯೆ ಅಥವಾ ನಂಬಿಕೆಗಳಿಂದ ತನ್ನೊಳಗೆ ಅಥವಾ ಹೊರಗಿನ ಪ್ರಭಾವದಿಂದ ಆಗಿರಬಹುದಾದ ವ್ಯತ್ಯಾಸಗಳು".

ಮೆರಿಲ್ ಅಂಡ್ ಎಲ್ಡ್ರಿಡ್ಜ್ ಪ್ರಕಾರ "ಸಾಮಾಜಿಕ ಬದಲಾವಣೆಯೆಂದರೆ ಒಂದು ಸಮುದಾಯದ ಹಿಂದಿನ ತಲೆಮಾರು ಈ ಹಿಂದೆ ತೊಡಗಿಸಿಕೊಂಡಿದ್ದ ಚಟುವಟಿಕೆಗಳು, ನಂಬಿಕೊಂಡಿದ್ದ ಸಿದ್ಧಾಂತಗಳು, ನಂಬಿಕೆಗಳು, ಪಾಲಿಸಿದ ರೀತಿ ನೀತಿಗಳಿಗೆ ಬದಲಾಗಿ ಬೇರೆ ರೀತಿಯ ಚಟುವಟಿಕೆಗಳು ಸಿದ್ಧಾಂತಗಳು ನಂಬಿಕೆಗಳು ರೀತಿನೀತಿಗಳನ್ನು ಹೆಚ್ಚಿನ ಸಂಖ್ಯೆಯ ಜನರು ಪಾಲಿಸುವುದು".

ಕರ್ನಾಟಕದಲ್ಲಿ ಬಹುದೊಡ್ಡ ಸಮಾಜವೆಂದರೆ ಲಿಂಗಾಯತ ಸಮುದಾಯ. ಇದು ಶಿಕ್ಷಣ ರಾಜಕೀಯ ಮತ್ತು ಆರ್ಥಿಕವಾಗಿ ಮುಂದುವರೆದ ಸಮುದಾಯವೆಂದು ಗುರುತಿಸಲಾಗಿದೆ. ಈ ಸಮುದಾಯಕ್ಕೆ ನೂರಾರು ವರ್ಷಗಳ ಚಾರಿತ್ರಿಕ ಹಿನ್ನೆಲೆ ಇದೆ. ಪ್ರಾಚೀನ ಕಾಲದಲ್ಲಿ ಭಾರತೀಯ ಸಮಾಜವು ನಾಲ್ಕು ವರ್ಣಗಳಿಂದ ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ವರ್ಗದವರಿಂದ ಕೂಡಿತ್ತು. ಇಂತಹ ವರ್ಣಾಶ್ರಮ ಧರ್ಮದಲ್ಲಿ ಶೂದ್ರ ವರ್ಗದಲ್ಲಿ ಅನೇಕ ಜಾತಿ ಉಪಜಾತಿಗಳು ವೃತ್ತಿಗೆ ಅನುಗುಣವಾಗಿ ಆರಂಭವಾದವು. ಆದರೆ ಇವರಲ್ಲಿ ಯಾರಿಗೂ ಸಮಾಜದಲ್ಲಿ ಧಾರ್ಮಿಕ ಸ್ಥಾನಮಾನವಿರಲಿಲ್ಲ. ಏಕೆಂದರೆ ಆ ಕಾಲದಲ್ಲಿ ಒಬ್ಬ ವ್ಯಕ್ತಿಯ ಸಾಮಾಜಿಕ ಅಂತಸ್ತನ್ನು ನಿರ್ಧರಿಸುವ ಮಾನದಂಡ ಆತನ ವರ್ಣವಾಗಿತ್ತು. ಅಂದು ಶೂದ್ರವರ್ಗದವರನ್ನು ವರ್ಣಾಶ್ರಮ ವ್ಯವಸ್ಥೆಯು ಸಮಾಜವನ್ನು ಶೋಷಣೆ ಮಾಡುತ್ತಿತ್ತು. ಇದರ ವಿರುದ್ಧ ಭಾರತದಲ್ಲಿ ಮೊಟ್ಟಮೊದಲಿಗೆ ಪ್ರತಿಭಟಿಸಿ ತಮ್ಮದೇ ಆದ ಧರ್ಮವನ್ನು ಸ್ಥಾಪಿಸಿದವರೆಂದರೆ ಗೌತಮಬುದ್ಧ ಮತ್ತು ಮಹಾವೀರ ಇವರಿಬ್ಬರು ಕ್ಷತ್ರಿಯ ಜನಾಂಗಕ್ಕೆ ಸೇರಿದವರಾಗಿದ್ದರು. ಈ ಧರ್ಮಗಳು ಆರಂಭದಲ್ಲಿ ಶೋಷಿತವರ್ಗದವರನ್ನು ಆಕರ್ಷಿಸಲು ಯಶಸ್ವಿಯಾದವು. ಅನೇಕ ಶೂದ್ರ ವರ್ಗದ ಗುಂಪಿಗೆ ಸೇರಿದ ಜಾತಿಗಳು ಈ ಧರ್ಮಗಳ ಅನುಯಾಯಿಗಳಾದರು. ಈ ಧರ್ಮಗಳಿಗೆ ರಾಜಾಶ್ರಯವು ಲಭಿಸಿತು. ಈಗಾಗಲೇ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ವೈದಿಕ ಧರ್ಮಕ್ಕೆ ಹಿನ್ನಡೆ ಉಂಟಾಯಿತು. ಉದಾ: ಮೌರ್ಯ ಸಾಮ್ರಾಜ್ಯದ ಚಕ್ರವರ್ತಿಯಾದ ಚಂದ್ರಗುಪ್ತ ಮೌರ್ಯ ಮತ್ತು ಅಶೋಕ ಜೈನಧರ್ಮ ಮತ್ತು ಬೌದ್ಧಧರ್ಮಗಳಿಗೆ ರಾಜಾಶ್ರಯವನ್ನು ನೀಡಿ ಆ ಧರ್ಮಗಳ ಏಳಿಗೆಗೆ ಕಾರಣಕರ್ತರಾದರು. ಎಂಬುದನ್ನು ಚರಿತ್ರೆಯಲ್ಲಿ ಕಾಣಬಹುದು. ಆದರೆ ಕಾಲಕಳೆದ ನಂತರ ಹಿನ್ನಡೆಯಾಗಿದ್ದ ವೈದಿಕ ಧರ್ಮ ಮುನ್ನಡೆಗೆ ಬಂದುದು ಗುಪ್ತರ ಕಾಲದಲ್ಲಿ. ಹೀಗೆ ಧರ್ಮಗಳ ಭಾರತೀಯ ಸಮಾಜದಲ್ಲಿ ಪ್ರಾಚೀನ ಕಾಲದಲ್ಲಿ ಬೌದ್ಧಧರ್ಮ, ಜೈನಧರ್ಮ, ವೈದಿಕಧರ್ಮದ ಹಾವು ಏಣಿಯಾಟವು 11ನೇ ಶತಮಾನದವರೆಗೂ ಮುಂದುವರೆಯಿತು. ಆದರೆ ಆ ಶತಮಾನದ ವೇಳೆಗೆ ರಾಜಶ್ರಯ ಪಡೆದುಕೊಂಡು ಏಳಿಗೆಯಲ್ಲಿದ್ದ ಬೌದ್ಧಧರ್ಮ ಕ್ರಮೇಣ ಭಾರತದಿಂದ ಕಣ್ಮರೆಯಾಯಿತು. ಆದರೆ ಜೈನಧರ್ಮದ ಆಚರಣೆಗಳು ಸಾಮಾನ್ಯ ಜನರಿಗೆ ಅನುಸರಿಸಲು ಕಷ್ಟದಾಯಕವಾದುದರಿಂದ ಆ ಧರ್ಮದ ಜನಪ್ರಿಯತೆ ಕಡಿಮೆಯಾಯಿತು. ಅಲ್ಲದೆ 11ನೇ ಶತಮಾನದ ವೇಳೆಗೆ ಜೈನಧರ್ಮ ಶೂದ್ರವರ್ಗದದವರಿಗೆ ತನ್ನ ಬಾಗಿಲನ್ನು ಮುಚ್ಚಿತು. ಆದ್ದರಿಂದ ಸಾಮಾಜಿಕವಾಗಿ ಶೋಷಣೆಗೆ ಒಳಗಾಗಿದ್ದ ಶೂದ್ರ ವರ್ಗದವರಿಗೆ ಯಾವುದಾದರೊಂದು ಧಾರ್ಮಿಕ ನೆಲೆಯ ಅನಿವಾರ್ಯತೆ ಉಂಟಾಯಿತು.

ವೈದಿಕ ಪಂಥಗಳಾದ ಶೈವ ಮತ್ತು ವೈಷ್ಣವ ಮತ್ತೊಮ್ಮೆ ಪ್ರಜ್ವಲಿಸಲಾರಂಭಿಸಿದವು. ಇಂತಹ ಸನ್ನಿವೇಶದಲ್ಲಿ 12ನೇ ಶತಮಾನದಲ್ಲಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದ ಬಸವಣ್ಣ ವೈದಿಕ ಧರ್ಮದ ವಿರುದ್ಧ ಸಿಡಿದೆದ್ದು ಕಲ್ಯಾಣದಲ್ಲಿ ಅನುಭವ ಮಂಟಪವನ್ನು ಸ್ಥಾಪನೆ ಮಾಡುವುದರ ಮೂಲಕ ಲಿಂಗಾಯತ ಧರ್ಮವನ್ನು ಕರ್ನಾಟಕದಲ್ಲಿ ಸ್ಥಾಪಿಸಿದನೆಂದು ಹೇಳಲಾಗಿದೆ. ಆದರೆ ಈ ಧರ್ಮದ ಮೂಲದ ಬಗ್ಗೆ ಇಂದಿಗೂ ಕೂಡ ಅನೇಕ ಭಿನ್ನಾಭಿಪ್ರಾಯಗಳು ಇವೆ. ಅವುಗಳನ್ನು ನಾನು ಮಹಾಪ್ರಬಂಧದಲ್ಲಿ ಚರ್ಚಿಸುತ್ತೇನೆ.

ಲಿಂಗಾಯತ ಅಂದರೆ ಲಿಂಗವನ್ನು ಧರಿಸಿದವನು ಎಂದು ಅರ್ಥೈಯಿಸಬಹುದು. ಇದನ್ನು ಕನ್ನಡ ನಿಘಂಟು ಮತ್ತು ಶಬ್ದಕೋಶಗಳು ಈ ಅರ್ಥವನ್ನು ಸಮರ್ಥಿಸುತ್ತವೆ. ಎದೆಯ ಮೇಲೆ ಲಿಂಗ ಧರಿಸಿದವರೆಲ್ಲಾ ಲಿಂಗಾಯತರು ಎಂದು ರೂಢಿಯಲ್ಲಿ ಕರೆಯಲಾಗಿದೆ. ಶಾಸನದಲ್ಲಿ ಇದನ್ನು ಲಿಂಗವಂತ, ಶಿವಾಚಾರದವ ಎಂದು ಉಲ್ಲೇಖಿಸಲಾಗಿದೆ. ಈ ಪದಗಳನ್ನು ಕರ್ನಾಟಕಕ್ಕೆ 1800ರಲ್ಲಿ ಭೇಟಿ ನೀಡಿ ಅನೇಕ ದಾಖಲೆಗಳನ್ನು ಸಂಗ್ರಹಿಸಿದ "ಕರ್ನಲ್ ಮೆಂಕಜಿಯು" ಕೂಡ ಈ ಪದಗಳನ್ನು ತನ್ನ ದಾಖಲೆಗಳಲ್ಲಿ ಬಳಸಿದ್ದಾರೆ. ಲಿಂಗಾಯತರನ್ನು ಶಿವಭಕ್ತ, ಶಿವಶರಣ ಎಂದು ಕರೆಯುತ್ತಾರಲ್ಲದೆ ಇವರನ್ನು ವೀರಶೈವರು ಎಂದು ಕೂಡ ಕರೆಯಲಾಗಿದೆ.

ವೀರಶೈವ ಎಂದರೆ ವಿಶೇಷಾರ್ಥ ಪ್ರಕಾಶಿಕೆಯಲ್ಲಿ ಮಾತ್ರ ಎರಡು ಸಲ ಬಳಕೆಯಾಗಿದ್ದು ಒಮ್ಮೆ ವಿ=ವಿಕಲ್ಪ ರ=ರಹಿತ ವಿಕಲ್ಪರಹಿತವಾಗಿರುವ ಶೈವವು ವೀರಶೈವವೆಂದು ಇನ್ನೊಮ್ಮೆ ವಿಕಲ್ಪರಹಿತವಾಗಿರುವ ಏಕೈಕ ಧರ್ಮವೆಂದು ವಿಭಿನ್ನ ಅರ್ಥವನ್ನು ನೀಡಲಾಗಿದೆ. ಒಟ್ಟಾರೆ ಹೇಳುವುದಾದರೆ 12ನೇ ಶತಮಾನಕ್ಕಿಂತ ಪೂರ್ವದಲ್ಲಿ ವೀರಶೈವರ ಮೂಲವನ್ನು ಗುರುತಿಸಲಾಗಿದ್ದರೂ ಕೂಡ ಅದಕ್ಕೆ ಸ್ಪಷ್ಟವಾದ ನಿಖರವಾದ ದಾಖಲೆಗಳು ಸಿಕ್ಕಿಲ್ಲ.

12ನೇ ಶತಮಾನದಲ್ಲಿ ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನ ಮಂತ್ರಿಯಾಗಿದ್ದ ಬಸವಣ್ಣನವರಿಂದ ಲಿಂಗಭೇದವೆನ್ನದೇ ಸಮಾನತೆಯನ್ನು ಸಾರುವ ಇಷ್ಟಲಿಂಗದ ಪರಿಕಲ್ಪನೆಯನ್ನು ಹುಟ್ಟುಹಾಕಿದರು. ಸಾಮಾಜಿಕ ಅಸಮಾನತೆಯಿಂದ ಕೂಡಿದ ಸಮಾಜವನ್ನು ಸಮಸಮಾಜ ಮಾಡಲು ಇಷ್ಟಲಿಂಗವನ್ನು ನೀಡಿ ಸಮಾಜದಲ್ಲಿ ಸಮಾನತೆಯನ್ನು ತರಲು ಪ್ರಯತ್ನಿಸಿದರು. ಅಂದು ಧಾರ್ಮಿಕ ಶೋಷಣೆಯಿಂದ ನಲುಗಿದ್ದ ಅನೇಕ ಶೂದ್ರವರ್ಗ ಅನೇಕ ಜಾತಿಗಳು ಬಸವಣ್ಣನವರು ನೀಡಿದ ಇಷ್ಟಲಿಂಗವನ್ನು ಧರಿಸಿ ಲಿಂಗಾಯತರಾಗಿ ತಮ್ಮ ಸಾಮಾಜಿಕ ಅಂತಸ್ತನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದರು. ಇದರ ಫಲವಾಗಿ ವೈದಿಕ ಧರ್ಮಕ್ಕೆ ಪರ್ಯಾಯವಾಗಿ ಕರ್ನಾಟಕದಲ್ಲಿ ಲಿಂಗಾಯತ ಸಮುದಾಯವು ಉದಯವಾಗಿದ್ದನ್ನು ಚರಿತ್ರೆಯಲ್ಲಿ ಗುರುತಿಸುತ್ತೇವೆ. 12ನೇ ಶತಮಾನದಲ್ಲಿ ಬಸವಣ್ಣನವರ ವಿರುದ್ಧ ಸಿಡಿದೆದ್ದ ಪಟ್ಟಭದ್ರ ಹಿತಾಸಕ್ತಿಗಳು ಅವರ ಲಿಂಗಾಯತ ಧರ್ಮದ ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿದರು. ಆದರೆ ಬಸವಣ್ಣನವರ ಅನುಯಾಯಿಗಳು ಲಿಂಗಾಯತ ತತ್ವವನ್ನು ಒಳಗೊಂಡ ವಚನಸಾಹಿತ್ಯವನ್ನು ರಹಸ್ಯವಾಗಿ ತೆಗೆದುಕೊಂಡು ಕಲ್ಯಾಣವನ್ನು ಬಿಟ್ಟು ಪಲಾಯನ ಮಾಡಿದರು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ನಂತರ ಸಂಗಮ ವಂಶದ ಆಳ್ವಿಕೆಯ ಕಾಲದಲ್ಲಿ

ಉದಯಿಸಿದ ನೂರೊಂದು ವಿರಕ್ತರು 12ನೇ ಶತಮಾನದ ಶರಣರು ರಚಿಸಿದ ಲಿಂಗಾಯತ ಸಾಹಿತ್ಯವನ್ನು (ವಚನಸಾಹಿತ್ಯ) ಶೋಧನೆ ಮಾಡಿ ಅದನ್ನು ಪ್ರಚಾರಪಡಿಸಿದರು. ಹೀಗೆ ಕಲ್ಯಾಣದಲ್ಲಿ ಆರಂಭವಾದ ಲಿಂಗಾಯತ ಆಂದೋಲನ 15ನೇ ಶತಮಾನಕ್ಕೆ ಹಂಪೆಯನ್ನು ಪ್ರವೇಶಿಸಿತು. ಈ ಆಂದೋಲನ 16ನೇ ಶತಮಾನದಲ್ಲಿ ದಕ್ಷಿಣ ಕರ್ನಾಟಕವನ್ನು ಪ್ರವೇಶಿಸಿತು. ಎಡೆಯೂರು ಸಿದ್ಧಲಿಂಗೇಶ್ವರರ ನಾಯಕತ್ವದಲ್ಲಿ 701 ವಿರಕ್ತರು ಜೊತೆಗೂಡಿ ಈ ಧರ್ಮವನ್ನು ಪ್ರಚಾರ ಮಾಡಿದರು. ಇಂತಹ ಸಂದರ್ಭದಲ್ಲಿ ಅನೇಕ ಶೂದ್ರವರ್ಗಗಳು ಲಿಂಗಾಯತ ಸಮುದಾಯವನ್ನು ಸ್ವೀಕಾರ ಮಾಡಿದವು.

ಉದಾಹರಣೆಗೆ ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೋಕಿನ ಹಾಗಲವಾಡಿಯ ಪಾಳೇಗಾರ ಮುದಿಯಪ್ಪ ನಾಯಕನು ಮತ್ತು ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿ ಪಾಳೇಗಾರರು ಈ ಸಮುದಾಯಕ್ಕೆ ಮತಾಂತರವಾಗಿರುವುದನ್ನು ಚರಿತ್ರೆಯಲ್ಲಿ ಈಗಾಗಲೇ ಸಂಶೋಧಿಸಲಾಗಿದೆ. ಅಲ್ಲದೇ ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಅನೇಕ ಪಾಳೆಪಟ್ಟುಗಳಾದ ಚಿತ್ರದುರ್ಗ, ನಿಡಗಲ್, ಪಾವಗಡ, ಜರಿಮಲೆ, ಸಂತೆಬೆನ್ನೂರು, ಕೆಳದಿ, ಮಧುಗಿರಿ, ಯಲಹಂಕ ಇತ್ಯಾದಿ.

ಒಟ್ಟಾರೆ ಹೇಳುವುದಾದರೆ 12ನೇ ಶತಮಾನದಲ್ಲಿ ಕಲ್ಯಾಣದಲ್ಲಿ ಜರುಗಿದ ಲಿಂಗಾಯತ ಸಮುದಾಯದ ಆಂದೋಲನ 14 ಮತ್ತು 15ನೇ ಶತಮಾನದಲ್ಲಿ ಹಂಪೆಯ ಮೂಲಕ 16ನೇ ಶತಮಾನದಲ್ಲಿ ದಕ್ಷಿಣ ಕರ್ನಾಟಕವನ್ನು ಪ್ರವೇಶಿಸಿತು. ಅಂದು ಆ ಆಂದೋಲನವು ತುಮಕೂರಿಗೆ ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡು ಮುನ್ನಡೆಯಿತು ಎಂದು ಸಂಶೋಧನೆಗಳು ದೃಢೀಕರಿಸಿದೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಲಿಂಗಾಯತ ಮತ ಕೇವಲ ನಾಲ್ಕು ಶತಮಾನಗಳ ಅವಧಿಯಲ್ಲಿಯೇ ಇಡೀ ಕರ್ನಾಟಕವನ್ನು ವ್ಯಾಪಿಸಿತ್ತೆಂದು ಹೇಳಬಹುದು. ಈ ಮತಕ್ಕೆ ಅನೇಕ ಶೂದ್ರವರ್ಗಗಳು ಮತಾಂತರಗೊಂಡವು. ಆದರೆ ಅವರು ಮತಾಂತರವಾಗಿದ್ದರೂ ತಮ್ಮ ಮೂಲ ಆಚರಣೆಗಳನ್ನು ಕೈಬಿಡದೆ ಲಿಂಗಾಯತ ತತ್ವವನ್ನು ಜೊತೆಗೂಡಿ ಲಿಂಗಾಯತ ಸಮುದಾಯಕ್ಕೆ ಪ್ರೋತ್ಸಾಹ ನೀಡಿದ್ದರ ಬಗ್ಗೆ ಸಂಶೋಧನೆಗಳು ತಿಳಿಸುತ್ತವೆ. ಆದ್ದರಿಂದ ಅವರಲ್ಲಿ ಅನೇಕ ತಾತ್ವಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳನ್ನು ಇಡೀ ಕರ್ನಾಟಕದಾದ್ಯಂತ ಲಿಂಗಾಯತ ಸಮುದಾಯದಲ್ಲಿ ಕಾಣಬಹುದು. ಆದರೆ ಇದನ್ನು ನಾನು ಅಧ್ಯಯನದ ದೃಷ್ಟಿಯಿಂದ "ಹದಿನಾರನೇ ಶತಮಾನದಲ್ಲಿ ದಕ್ಷಿಣ ಕರ್ನಾಟಕದ ಲಿಂಗಾಯತ ಸಮುದಾಯದ ಕೇಂದ್ರವಾಗಿದ್ದ ತುಮಕೂರು ಪ್ರದೇಶವನ್ನು ಅನುಲಕ್ಷಿಸಿ ಸಂಶೋಧನೆಯನ್ನು ಕೈಗೊಳ್ಳುತ್ತೇನೆ".

ಶೈವ ಸಿದ್ಧಾಂತ ಭಾರತದ ಬಹಳಷ್ಟು ಭಾಗದಲ್ಲಿ ಆಚರಣೆಯಲ್ಲಿದೆ. ಇದನ್ನು ಮುಖ್ಯವಾಗಿ ಮೂರು ಭಾಗಗಳನ್ನಾಗಿ ಮಾಡಬಹುದು. ಉತ್ತರದಲ್ಲಿರುವ ಕಾಶ್ಮೀರಿಶೈವರು, ಕರ್ನಾಟಕ ಮತ್ತು ಆಂಧ್ರಭಾಗಗಳಲ್ಲಿರುವ ವೀರಶೈವರು ಮತ್ತು ತಮಿಳುನಾಡಿನ ಶೈವರು. ಶೈವ ಸಿದ್ಧಾಂತವು ವೇದ, ಆಗಮಗಳನ್ನು ಒಳಗೊಂಡಿದ್ದು ವೈದಿಕ ಆಚರಣೆಗಳನ್ನು ಹೊಂದಿದೆ. ನಂದಿಮಠ್ ಎಸ್.ಸಿ.: ಎ ಹ್ಯಾಂಡ್ ಬುಕ್ ಆಫ್ ವೀರಶೈವಿಸಂ ಬೈ ಮೋತಿಲಾಲ್ ಬನಾರಿದಾಸ್, ಪಾಟ್ನ 1942, ನಂ. 56 ರಿಂದ 58.

ಕರ್ನಾಟಕದಲ್ಲಿಯೂ ಸಹ ಶೈವ ಸಿದ್ಧಾಂತದ ಹಲವು ಪಂಥಗಳಿವೆ. ಪಾಶುಪಥ, ಕಾಳಮುಖಿ, ಕಪಾಲಿ, ಶುದ್ಧಶೈವ, ಮುಂತಾದವು ಹಲವು ಶಾಸನಗಳ ಪ್ರಕಾರ ಕಾಳಮುಖಿ ಪಂಥದ ಗುರುಗಳು ರಾಜರಿಂದ ಮತ್ತು ಪ್ರಮುಖ ಅಧಿಕಾರಿಗಳಿಂದ ಹೆಚ್ಚಿನ ಗೌರವ ಪಡೆಯುತ್ತಿದ್ದರು ಮತ್ತು ರಾಜರಿಂದ ಪೂಜಿಸಲ್ಪಡುತ್ತಿದ್ದರು ಎಂದು ತಿಳಿದುಬರುತ್ತದೆ.

ಸಮಕಾಲೀನ ಲಿಂಗಾಯತ ಸಿದ್ಧಾಂತ ತತ್ವಶಾಸ್ತ್ರ ಮತ್ತು ಸಮಾಜ ಸುಧಾರಣೆಯ ಒಂದು ಹದವಾದ ಮಿಶ್ರಣ. 12ನೇ ಶತಮಾನದಲ್ಲಿ ಬಸವಣ್ಣ ಬೋಧಿಸಿ ಆಚರಿಸಿ, ಅನುಷ್ಠಾನಕ್ಕೆ ತಂದ ಈ ಸಿದ್ಧಾಂತ ದಕ್ಷಿಣಭಾರತದಲ್ಲಿ ಅದರಲ್ಲೂ ವಿಶೇಷವಾಗಿ ಕರ್ನಾಟಕದ ಜನತೆಯ ಮೇಲೆ ಹೆಚ್ಚಿನದಾದ ಪ್ರಭಾವ ಬೀರಿತು. ನಿರಾಕಾರನಾದ ಶಿವನನ್ನು ಇಷ್ಟಲಿಂಗದ ಮೂಲಕ ಪೂಜಿಸುವ ಏಕದೇವೋಪಾಸಕರಾಗಿ ಲಿಂಗಾಯತ ಸಮುದಾಯ ನಿಲ್ಲುತ್ತದೆ. ದೇಹದ ಮೇಲೆ ಒಂದು ದಾರ ಅಥವಾ ಬಟ್ಟೆಯಲ್ಲಿ ಇಷ್ಟಲಿಂಗವನ್ನು ಎದೆಯ ಭಾಗಕ್ಕೆ ಬರುವಂತೆ ಕಟ್ಟಿಕೊಂಡು ದೇಹವನ್ನೇ ದೇವಾಲಯವನ್ನಾಗಿಸಿ ಎನ್ನೊಳಗಿನ ಚೈತನ್ಯವನ್ನೇ ಇಷ್ಟಲಿಂಗದ ಮೂಲಕ ದರ್ಶಿಸುವ ವಿಭಿನ್ನ ಪೂಜಾಕ್ರಮ ಈ ಲಿಂಗಾಯತ ಸಿದ್ಧಾಂತದಲ್ಲಿದೆ.

ಲಿಂಗಾಯತ ತತ್ವ ಮತ್ತು ಇಷ್ಟಲಿಂಗಧಾರಣೆ ಬಸವಣ್ಣನಿಂದ ಜನಪ್ರಿಯವಾಯಿತು. ಅದೇ ಸಮಯಕ್ಕೆ ವೈಚಾರಿಕವಾಗಿ ಮಾನವೀಯ ಮೌಲ್ಯಗಳನ್ನೊಳಗೊಂಡ ಸಮಾಜಮುಖಿ ಸಿದ್ಧಾಂತಗಳನ್ನು ವಚನಗಳ ಮೂಲಕ ಸಾಮಾನ್ಯ ಜನರಿಗೆ ತಲುಪಿಸುವುದರ ಮುಖಾಂತರ ಒಂದು ಸಮಾನತೆಯ ವರ್ಣ, ವರ್ಗ, ಜಾತಿರಹಿತ ಸಮಾಜ ನಿರ್ಮಿಸಲು ಶ್ರಮಿಸಿದರು. ಲಿಂಗಾಯತ ಎಂದರೆ ಲಿಂಗ – ಇಷ್ಟಲಿಂಗವನ್ನು ಆಯತ – ತಂದುಕೊಡುವನು (ಹೊಂದಿದವನು) ಎನ್ನುವ ವಿಶಿಷ್ಟ ಸಮುದಾಯದ ಹುಟ್ಟು 12ನೇ ಶತಮಾನದ ಬಸವಾದಿ ಶಿವಶರಣರ ಶ್ರಮದ ಫಲ.

ತುಮಕೂರು ಜಿಲ್ಲೆಯು ಹತ್ತು ತಾಲ್ಲೋಕುಗಳಿಂದ ಕೂಡಿದ್ದು, ಅವುಗಳೆಂದರೆ : ತುಮಕೂರು, ಗುಬ್ಬಿ, ಚಿಕ್ಕನಾಯಕನಹಳ್ಳಿ, ತಿಪಟೂರು, ತುರುವೇಕೆರೆ, ಕುಣಿಗಲ್, ಕೊರಟಗೆರೆ, ಮಧುಗಿರಿ, ಪಾವಗಡ, ಶಿರಾ. ಈ ಜಿಲ್ಲೆಯ ಭೂ ವಿಸ್ತೀರ್ಣವು 10,597ಕಿ.ಮಿ ಹೊಂದಿದೆ.2011ರ ಜನಗಣತಿಯ ಪ್ರಕಾರ 26,78,980 ಜನಸಂಖ್ಯೆಯನ್ನು ಹೊಂದಿದ್ದು, ಇದರಲ್ಲಿ ಹಿಂದೂಗಳು 24, 13 812(90.10%) ಮುಸ್ಲಿಮರು 245923(9.18%) ಕ್ರಿಶ್ಚಿಯನ್ನರು 9130(0.34%) ಜೈನರು 5067(0.19%) ಈ ಧರ್ಮಿಯರನ್ನು ಒಳಗೊಂಡಿದೆ. ತುಮಕೂರು ಜಿಲ್ಲೆಯ ಜನಸಾಂದ್ರತೆಯು 253 ಚ.ಕಿ.ಮಿ. ಜನಸಂಖ್ಯೆಯನ್ನು ಹೊಂದಿದೆ. 2001 ರಿಂದ 2011ರವರೆಗೆ 3.74% ಜನಸಂಖ್ಯೆಯು ಬೆಳವಣಿಗೆಯಾಗಿದೆ. ತುಮಕೂರು ಜಿಲ್ಲೆಯ ಲಿಂಗಾನುಪಾತವು 1000 ಪುರುಷರಿಗೆ 984 ಮಹಿಳೆಯರನ್ನು ಹೊಂದಿದೆ. ಈ ಜಿಲ್ಲೆಯ ಸಾಕ್ಷರತೆಯ ಪ್ರಮಾಣವು 75.14% ಇರುತ್ತದೆ.

ತುಮಕೂರು ಜಿಲ್ಲೆಯೂ ಕರ್ನಾಟಕದಲ್ಲಿ ಒಂದಾಗಿದೆ. ರಾಜಧಾನಿ ಬೆಂಗಳೂರು ಹೆಬ್ಬಾಗಿಲಿನಂತಿದೆ. ಈ ಜಿಲ್ಲೆಯ ಕರ್ನಾಟಕದ ಮಧ್ಯಪೂರ್ವ ಭಾಗದಲ್ಲಿದ್ದು, ಉತ್ತರಕ್ಕೆ ಆನಂತಪುರ ಮತ್ತು ಚಿತ್ರದುರ್ಗ ಜಿಲ್ಲೆ, ಪೂರ್ವಕ್ಕೆ ಕೋಲಾರ ಮತ್ತು ಬೆಂಗಳೂರು ಜಿಲ್ಲೆ, ದಕ್ಷಿಣಕ್ಕೆ ಮಂಡ್ಯಜಿಲ್ಲೆ, ಪಶ್ಚಿಮಕ್ಕೆ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಂದ ಸುತ್ತುವರಿದಿದೆ. ಮೈದಾನ ಪ್ರದೇಶವೆನಿಸಿಕೊಂಡಿರುವ ಈ ಜಿಲ್ಲೆಯಲ್ಲಿ ಜಯಮಂಗಲಿ, ಶಿಂಷಾ, ಸುವರ್ಣಮುಖಿ, ಗರುಡಾಚಲ ಉತ್ತರಪಿನಾಕಿನಿ ಎಂಬ ಹೆಸರಿನ ನದಿಗಳು ಹರಿಯುತ್ತಿದ್ದುದಲ್ಲದೆ ಕುಮುದ್ವತಿ ಮತ್ತು ನಾಗಿಣಿ ಎಂಬ ತೊರೆಗಳು ಹರಿಯುತ್ತಿವೆ. ಆದರೆ ಇವೆಲ್ಲಾ ಕೇವಲ ಮಳೆಗಾಲದ ದಿನಗಳಲ್ಲಿ ಮಾತ್ರ ತುಂಬಿ ಹರಿಯುತ್ತಾ ಮುಖ್ಯ ನದಿಗಳಿಗೆ ಉಪನದಿಗಳಾಗಿ ಸೇರುತ್ತವೆ.

ಗಂಗರ ಆಳ್ವಿಕೆಯ ಜೊತೆಗೆ ತುಮಕೂರು ಜಿಲ್ಲೆಯ ಇತಿಹಾಸ ಹುಟ್ಟಿಕೊಳ್ಳುತ್ತದೆ. ಕ್ರಿ.ಶ. 1025ರಿಂದಲೇ ಗಂಗರಾಜ ಮನೆತನವು ಕರ್ನಾಟಕದ ದಕ್ಷಿಣ ಮತ್ತು ಪೂರ್ವ ಜಿಲ್ಲೆಗಳಲ್ಲಿ ಆಳ್ವಿಕೆ ನಡೆಸಿತ್ತು.

ಆದರೆ ತುಮಕೂರು ಜಿಲ್ಲೆಯಲ್ಲಿ ಇದಕ್ಕೂ ಮೊದಲೇ ಅಂದರೆ ಸುಮಾರು ಕ್ರಿ.ಶ.400ರಲ್ಲಿಯೇ ಗಂಗರು ಆಳ್ವಿಕೆ ನಡೆಸಿದ ದಾಖಲೆ ದೊರೆತಿದೆ. ಇದೇ ತುಮಕೂರು ಜಿಲ್ಲೆ ರಾಷ್ಟ್ರಕೂಟರು ಮತ್ತು ಚಾಲುಕ್ಯರಿಂದಲೂ ಆಳಲ್ಪಟ್ಟಿತು. ನಂತರ ನೊಳಂಬರು ಈ ಜಿಲ್ಲೆಯನ್ನು ಸುದೀರ್ಘ ಕಾಲ ಆಳಿದರು. ಚೋಳರು ಕೂಡ ಈ ಜಿಲ್ಲೆಯ ಕೆಲವು ಭಾಗಗಳಲ್ಲಿ ಆಳ್ವಿಕೆ ನಡೆಸಿದರು. ನಂತರ 13ನೇ ಶತಮಾನದಿಂದ 17ನೇ ಶತಮಾನದ ಕೊನೆಯ ಭಾಗದವರೆಗೂ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯನ್ನು ಈ ಜಿಲ್ಲೆಯು ಕಂಡಿತು. ತರುವಾಯ 18–19ನೇ ಶತಮಾನ ಸ್ವತಂತ್ರ ಭಾರತದವರೆವಿಗೂ ಮೈಸೂರು ಒಡೆಯರ ಆಳ್ವಿಕೆಯಲ್ಲಿತ್ತು. (ಥರ್ಸ್ಟನ್–ಮೈಸೂರು ಟ್ರೈಬ್ಸ್ ಅಂಡ್ ಕಾಸ್ಟ್ ಸಂಪುಟ 4 ಪು.ಸಂ.230.)

ಶಬ್ದ ನಿಷ್ಪತ್ತಿ ಪ್ರಕಾರ ತುಮಕೂರು ನಗರಕ್ಕೆ ಆ ಹೆಸರು "ತುಂಬೆ ಊರು" ಎನ್ನುವ ಪದಗಳಿಂದ ಬಂದಿದೆ ಎಂದು ನಂಬಲಾಗಿದೆ. ಏಕೆಂದರೆ ಬೆಳ್ಳಗೆ ಚಿಕ್ಕದಾಗಿ ಬೆಳೆಯುವ ಒಂದೆಳೆಯ ತುಂಬೆ ಹೂ ಶಿವಪೂಜೆಗೆ ಪ್ರಶಸ್ತವಾದದ್ದು ಎನ್ನುವ ನಂಬಿಕೆಯೂ ಇರುವ ಈ ಹೂವು ಪ್ರದೇಶದಲ್ಲಿ ಯಥೇಚ್ಚವಾಗಿ ಬೆಳೆಯುವುದರಿಂದ ತುಂಬೆ ಊರು ಕಾಲಕ್ರಮೇಣ ಜನರ ಬಾಯಲ್ಲಿ ತುಮಕೂರು ಆಗಿದೆ ಎನ್ನುವ ನಂಬಿಕೆ ಇದೆ.

ಇನ್ನೊಂದು ಮೂಲದ ಪ್ರಕಾರ ಜಾನಪದದ ಒಂದು ವಾದ್ಯ ಪರಿಕರವಾದ ತಮಟೆ ಬಾರಿಸುವನ ಊರು. "ತಮಟೂರು" ಕಾಲಕ್ರಮೇಣ 'ತುಮಕೂರು' ಎಂದಾಗಿದೆ ಎನ್ನುವ ವಾದವಿದೆ. ಮತ್ತೊಂದು ಮೂಲದ ಪ್ರಕಾರ ಈ ಭೂಪ್ರದೇಶವನ್ನು ಆಳುತ್ತಿದ್ದ ಚೋಳರು ಗೂಳೂರನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಸಮೀಪದಲ್ಲಿದ್ದ ಇತರ ಭೂಪ್ರದೇಶದಲ್ಲಿ ತಮ್ಮ ರಾಜಧಾನಿಯನ್ನು ರಕ್ಷಣೆ ಮಾಡಲು ನೇಮಿಸಿದ್ದರು. ತುರ್ತು ಅಪಾಯಕಾರಿ ಸಂದರ್ಭದಲ್ಲಿ ಆ ಕಾವಲುಗಾರರು 'ಟುಮಕಿ' ಎನ್ನುವ ಒಂದು ಬಗೆಯ ನಗಾರಿಯನ್ನು ಬಾರಿಸುವುದರ ಮೂಲಕ ರಾಜಧಾನಿಯ ಜನರಿಗೆ ಮುನ್ಸೂಚನೆ ಕೊಡುತ್ತಿದ್ದರು. ಹಾಗಾಗಿ 'ಟುಮಕಿಯ ಊರು' ಮುಂದೆ ತುಮಕೂರು ಆಯಿತು ಎನ್ನುವ ನಂಬಿಕೆಯೂ ಇದೆ. ಇತ್ತೀಚೆಗೆ ಭಾರತ ಸರ್ಕಾರ ಆಂಗ್ಲಭಾಷೆಯ ಖಿಗಒಏಗಿಖ ಎನ್ನುವ ಪದವನ್ನೇ ಕನ್ನಡ ಉಚ್ಚಾರಣೆಗೆ ಅನುಗುಣವಾಗಿ ಖಿಗಒಂಏಗಿಖಗ ಎಂದು ಮರುನಾಮಕರಣ ಮಾಡಿತು. ರಾಜ್ಯ ಸರ್ಕಾರದ ಮನವಿಗೆ ಸಮ್ಮತಿಸಿ 2014ರ ಅಕ್ಟೋಬರ್ 12ರಂದು ಅಧಿಕೃತವಾಗಿ ಘೋಷಿಸಿತು. ಹಾಗಾಗಿ ತುಮಕೂರು ಜೊತೆಗೆ ಬೇರೆ ಹನ್ನೆರಡು ನಗರಗಳು 2014 ನವಂಬರ್ 01ರಂದು ಮರು ನಾಮಕರಣಗೊಂಡಿತು. ಇವೆಲ್ಲಕ್ಕೂ ಮಿಗಿಲಾಗಿ ಹೆಚ್ಚು ತೆಂಗು ಬೆಳೆಯುವುದರಿಂದ 'ಕಲ್ಪತರು ನಾಡು' ಎಂದು ಕರೆಯಲ್ಪಟ್ಟಿದೆ.

ತುಮಕೂರು ನಗರ ಕೈಗಾರಿಕ ನಗರವೂ ಹೌದು. ಓಊ–4 ಮತ್ತು ಓಊ–206 ಎರಡು ರಾಷ್ಟ್ರೀಯ ಹೆದ್ದಾರಿಗಳನ್ನು ಹೊಂದಿದ್ದು 2010ರ ಆಗಸ್ಟ 28ರ ನಂತರ ಮಹಾನಗರ ಸಭೆಯಾಗಿ ಪರಿವರ್ತನೆಯಾಯಿತು. ತುಮಕೂರು ಜಿಲ್ಲೆಯ ಜಿಲ್ಲಾಕೇಂದ್ರವಾಗಿರುವ ಈ ನಗರ ಇತ್ತೀಚೆಗೆ ರಾಷ್ಟ್ರಮಟ್ಟದ "ಫುಡ್‌ಪಾರ್ಕ್" ಹೊಂದುವುದರ ಮೂಲಕ ವಿಶ್ವ ಭೂಪಟದಲ್ಲಿ ಗುರುತಿಸಿಕೊಳ್ಳುವಂತಾಗಿದೆ.

ನಗರದ ಜನಸಾಮಾನ್ಯರ ಭಾಷೆಯಾಗಿ ಕನ್ನಡ ಭಾಷೆಯೂ ಬಳಕೆಯಲ್ಲಿದೆ. ಈ ಜಿಲ್ಲೆಯಲ್ಲಿ ಆರು ತಾಂತ್ರಿಕ ಮಹಾವಿದ್ಯಾಲಯಗಳು, ಎರಡು ವೈದ್ಯಕೀಯ ಮಹಾವಿದ್ಯಾಲಯಗಳು, ಹದಿನೈದು ಐ.ಟಿ.ಐ.ಗಳು, ಆರು ಪಾಲಿಟೆಕ್ನಿಕ್‌ಗಳು ಮತ್ತು ಐವತ್ತೈದು ಪದವಿ ವಿದ್ಯಾಲಯಗಳು ಇದ್ದು ಈ ಜಿಲ್ಲೆಯು ಶೈಕ್ಷಣಿಕ ನಗರಿಯೂ ಆಗಿದೆ.

ತುಮಕೂರು ಜಿಲ್ಲೆಯಲ್ಲಿ ಏಳು ಕೈಗಾರಿಕಾ ಪ್ರದೇಶಗಳು, ಎಂಟು ಕೈಗಾರಿಕಾ ಎಸ್ಟೇಟುಗಳಿವೆ. ಜಿಲ್ಲೆಯ ಪ್ರಮುಖ ಬೆಳೆಯಾಗಿ ಭತ್ತ, ರಾಗಿ, ಮುಸುಕಿನ ಜೋಳ, ಬೇಳೆಕಾಳುಗಳು ಮತ್ತು ಸಿರಿಧಾನ್ಯಗಳು ಹಾಗೂ ಕಡಲೆಕಾಯಿ ಬೆಳೆಯುತ್ತಾರೆ. ಜಿಲ್ಲೆಯ ಜನರ ಮುಖ್ಯ ಉದ್ಯೋಗ ವ್ಯವಸಾಯ. ಭತ್ತ ಮತ್ತು ರಾಗಿ ಯಥೇಚ್ಚವಾಗಿ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಶೇಂಗಾ ಮುಖ್ಯವಾಗಿದೆ.

**ಸಾಹಿತ್ಯಾವಲೋಕನ**

ಪ್ರಸ್ತುತ ಅಧ್ಯಯನದ ಸಾಹಿತ್ಯಾವಲೋಕನವು ಲಿಂಗಾಯತ ಸಮುದಾಯಕ್ಕೆ ಸಂಬಂಧಿಸಿದ ಬರಹ ಮತ್ತು ಅಧ್ಯಯನಗಳ ಅವಲೋಕನವೇ ಆಗಿದೆ. ಸಾಹಿತ್ಯಾವಲೋಕನದ ಸಮಯದಲ್ಲಿ ಸಮುದಾಯದಲ್ಲಿನ ಸಾಮಾಜಿಕ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಅಭ್ಯಾಸಿಸಲಾಗಿದೆ. ಈ ಸಾಹಿತ್ಯಾವಲೋಕನದ ಮೊದಲ ಭಾಗ ಸಾಮಾಜಿಕ ಬದಲಾವಣೆಗಳನ್ನು ಕುರಿತ ಬರಹಗಳನ್ನು ಒಳಗೊಂಡಿದ್ದು, ಕೆಲವು ವಿವರಣಾತ್ಮಕವಾಗಿದೆ. ಎರಡನೆಯ ಭಾಗ ಐತಿಹಾಸಿಕ ಅಥವಾ ಪ್ರಾಕೃತಿಕ ವಿವರಣೆಯನ್ನು ಒಳಗೊಂಡಿದೆ.

**ಡಾ.ಎಂ.ಎನ್.ಶ್ರೀನಿವಾಸ್– 'ಸೋಷಿಯಲ್ ಚೇಂಜ್ ಇನ್ ಮಾಡ್ರನ್ ಇಂಡಿಯಾ' – ಅಲೈಡ್ ಪಬ್ಲಿಕೇಷನ್ 1966**. ಈ ಪುಸ್ತಕದಲ್ಲಿ ಆಧುನಿಕ ಭಾರತದಲ್ಲಿ ಸಾಮಾಜಿಕ ಬದಲಾವಣೆ ವಿಸ್ತಾರ ಮತ್ತು ಸಂಕೀರ್ಣವಾದದ್ದು. ಅದು ವಿಭಿನ್ನ ಕ್ಷೇತ್ರಗಳ ಸಮಗ್ರ ಅರ್ಥೈಸುವಿಕೆಯನ್ನು ಬಯಸುತ್ತದೆ ಎನ್ನುವ ಅಭಿಪ್ರಾಯ ಹೊಂದಿರುವ ಈ ಲೇಖಕರು ಭಾರತದಲ್ಲಿನ ಸಾಮಾಜಿಕ ಬದಲಾವಣೆಯ ಸಿದ್ಧಾಂತವನ್ನು ವಿವರಿಸಿದ್ದಾರೆ. ಈ ಸಮಾಜಶಾಸ್ತ್ರಜ್ಞರ ಪ್ರಕಾರ ಭಾರತದಲ್ಲಿ ಜಾತಿ ಎಂಬುದು ಒಂದು ದೇಶದ್ಯಾಂತ ಇರುವ ಪ್ರಕ್ರಿಯೆ. ಹಾಗಾಗಿ ಈ ಗ್ರಂಥದ ಸಿದ್ಧಾಂತಗಳು ಲಿಂಗಾಯತ ಸಮುದಾಯದ ಸಾಮಾಜಿಕ ಬದಲಾವಣೆಯನ್ನು ವಿವರಿಸಲು ಸಹಾಯವಾಗುತ್ತದೆ.

**ಆರ್.ಎಂ.ಮೆಕೈವರ್ ಮತ್ತು ಸಿ.ಹೆಚ್.ಫೇಜ್ 'ಸೊಸೈಟಿ' ಮ್ಯಾಕ್‌ಮಿಲನ್ ಮತ್ತು ಕಂಪನಿ ಲಿಮಿಟೆಡ್ ಲಂಡನ್ 1957**. ಈ ಗ್ರಂಥದಲ್ಲಿ ಸಾಮಾಜಿಕ ಬದಲಾವಣೆಯ ಸಿದ್ಧಾಂತವನ್ನು ಬಹು ಆಯಾಮಗಳಲ್ಲಿ ವರ್ಣಿಸಲಾಗಿದೆ. ಒಂದು ವಿಧಾನವಾಗಿ ಸಮಾಜ ಸಹಿಸಿಕೊಳ್ಳುವಿಕೆ ಅರ್ಥ ಸಾಮಾಜಿಕ ಬದಲಾವಣೆಯ ಶಾಶ್ವತ ಸನ್ನಿವೇಶಗಳು, ರೀತಿಗಳು, ವಿನ್ಯಾಸಗಳು, ಸಿದ್ಧಾಂತಗಳ ಬಳಕೆ, ಬದಲಾವಣೆಯ ವಸ್ತುಸ್ಥಿತಿಗಳು, ತಾಂತ್ರಿಕ ಅಂಶಗಳು ಮತ್ತು ಸಾಂಸ್ಕೃತಿ ಅಂಶಗಳು ಇವೆಲ್ಲವೂ ತನ್ನ ಅಧ್ಯಯನದ ವಸ್ತುವಿಗೆ ಪೂರಕವಾಗಿದೆ.

**ಡಾ. ಎಂ. ಚಿದಾನಂದಮೂರ್ತಿ 'ಲಿಂಗಾಯತ ಅಧ್ಯಯನಗಳು' ವಾಗ್ದೇವಿ ಪುಸ್ತಕಗಳು 1986**. ಲೇಖಕರು ತಮ್ಮ ಗ್ರಂಥದಲ್ಲಿ ಲಿಂಗಾಯತ ಸಮುದಾಯದ ಸಾಹಿತ್ಯ, ಧರ್ಮ, ಸಂಸ್ಕೃತಿ, ಮತ್ತು ಸಮಾಜವನ್ನು ವರ್ಣಿಸಿದ್ದಾರೆ. ಲಿಂಗಾಯತ ಸಮುದಾಯದ ಮೂಲ ಮತ್ತು ಬೆಳವಣಿಗೆಯನ್ನು ಲೇಖಕರು ಚರ್ಚಿಸಿದ್ದಾರೆ. ಪಾಂಡಿತ್ಯಪೂರ್ಣ ಬರಹ ಎಲ್ಲಾ ಮೂಲಗಳಿಂದಲೂ ಸಂಮೃದ್ಧ ಪುರಾವೆಗಳನ್ನು ಒದಗಿಸುತ್ತದೆ. ಇದು ನನ್ನ ಅಧ್ಯಯನಕ್ಕೆ ಬಹಳಷ್ಟು ಸಹಾಯಕವಾಗಿದೆ.

**ಪ್ರೊ.ಮಾಳವಾಡ್.ಎಸ್.ಎಸ್. 'ವೀರಶೈವ ಸಿದ್ಧಾಂತ ಮತ್ತು ವಚನಕಾರರು' ಬಸವ ಸಮಿತಿ ಬೆಂಗಳೂರು 1980**. ಈ ಗ್ರಂಥವು

ವೀರಶೈವ ಮತ್ತು ವಚನಕಾರರ ಬಗೆಗೆ ಹೆಚ್ಚಿನ ವಿವರಗಳನ್ನು ಒಳಗೊಂಡಿದೆ. ಲಿಂಗಾಯತ ಸಮುದಾಯದ ಬಗ್ಗೆ ನಿಖರವಾದ ವಿವರಗಳನ್ನು ನೀಡುತ್ತದೆ.

**ಡಾ.ನಂದಿಮಠ್.ಎಸ್.ಸಿ. 'ವೀರಶೈವ ಸಿದ್ಧಾಂತ ಒಂದು ಕೈಪಿಡಿ' ಮೋತಿಲಾಲ್ ಬನಾರಸಿದಾಸ್ 1942**. ಈ ಲೇಖಕರು ವೀರಶೈವರನ್ನು ಲಿಂಗಾಯತರೆಂದು ಕರೆಯಬಹುದೆಂದು ಅಭಿಪ್ರಾಯಪಡುತ್ತಾರೆ. ಅದು ಅಪ್ಪಟ ಶೈವವಾದ ಕರ್ನಾಟಕದ ಈಶಾನ್ಯಭಾಗದಲ್ಲಿ 12ನೇ ಶತಮಾನದ ಅಂತ್ಯದವರೆಗೂ ಪ್ರಚಲಿತದಲ್ಲಿತ್ತು. ಪ್ರಸ್ತುತ ಅಧ್ಯಯನಕ್ಕೆ ಈ ಗ್ರಂಥ ಸಹಾಯಕಾರಿ.

**ಎಂ.ಆರ್.ಸಾಖರೆ 'ಲಿಂಗಾಯತ ತತ್ವ ಮತ್ತು ಇತಿಹಾಸ' ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ 1978**. ಈ ಗ್ರಂಥವು ಲಿಂಗಾಯತ ತತ್ವಸಿದ್ಧಾಂತಗಳನ್ನು ವಿವರವಾಗಿ ತಿಳಿಸುತ್ತದೆ. ಇಲ್ಲಿ ಲೇಖಕರು ಇಷ್ಟಲಿಂಗದ ಮೂಲ ಬೆಳವಣಿಗೆ ತಿಳಿಸುತ್ತಾ, ಬಸವಣ್ಣನವರ ತತ್ವಗಳು ವಿಸ್ತಾರಗೊಳ್ಳುತ್ತ ಹೇಗೆ ಹೆಚ್ಚುಹೆಚ್ಚು ಜಾತಿಗಳನ್ನು ತಲುಪುತ್ತವೆ ಎನ್ನುವುದನ್ನು ವಿವರಿಸಿದ್ದಾರೆ.
ಕುಪ್ಪುಸ್ವಾಮಿ.ಬಿ.ರವರ ಭಾರತದಲ್ಲಿ ಸಾಮಾಜಿಕ ಬೆಳವಣಿಗೆ ಈ ಗ್ರಂಥವು ಸಾಮಾಜಿಕ ಬದಲಾವಣೆಯ ರೀತಿ ಭಾರತದಲ್ಲಿನ ಸಾಮಾಜಿಕ ಬದಲಾವಣೆಯ ಕುರಿತಾದ ವಿಷಯಗಳನ್ನೊಳಗೊಂಡಿದೆ.

**ಟಿ.ಬಿ.ಬಾಟಮೋರ್ –'ಸೋಸಿಯಾಲಜಿ' ಬ್ಲ್ಯಾಕಿ ಅಂಡ್ ಸನ್ ಲಿಮಿಟೆಡ್ 1986**. ಈ ಗ್ರಂಥವು ಬದಲಾವಣೆಯ ಸಿದ್ಧಾಂತ ಸಾಮಾಜಿಕ ಬದಲಾವಣೆಯ ಅಭಿವೃದ್ಧಿ ಮತ್ತು ಏಳಿಗೆಯ ಅಂಶಗಳ ಬಗೆಗೆ ತಿಳಿಸುತ್ತದೆ. ಈ ಸಿದ್ಧಾಂತಗಳು ನನ್ನ ಸಂಶೋಧನ ವಿಷಯಕ್ಕೆ ಬಹುಮುಖ್ಯವಾಗಿದೆ.

**ಡಿ.ಆರ್.ಸಚ್‌ದೇವ್ ಮತ್ತು ವಿದ್ಯಾಭೂಷಣ್ 'ಇಂಟ್ರಡಕ್ಷನ್ ಟು ಸೊಷಿಯಾಲಜಿ' ಕಿತಾಬ್ ಮಹಲ್ 2005**. ಇದು ಸಮಾಜಶಾಸ್ತ್ರದ ಬಗೆಗಿನ ಒಂದು ಸಾಮಾನ್ಯಗ್ರಂಥ. ಆದರೆ ಸಾಮಾಜಿಕ ಬದಲಾವಣೆ, ಬದಲಾವಣೆಯ ದಿಕ್ಕು, ಬದಲಾವಣೆಗೆ ಕಾರಣ, ಬದಲಾವಣೆಯ ವಿಧಾನ, ಮೌಲ್ಯಮಾಪನ, ಅದರ ಪ್ರಗತಿ ಅರ್ಥ, ಯೋಜನೆ, ಇವೆಲ್ಲವನ್ನೊಳಗೊಂಡಿದೆ. ಈ ಅಂಶಗಳು ಲಿಂಗಾಯತ ಸಮುದಾಯದ ಬದಲಾವಣೆಗಳನ್ನು ಅರಿಯಲು ಸಹಾಯಕವಾಗಿದೆ.

**ಥರ್ಸ್ಟನ್ ಈ ಮೈಸೂರು 'ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್'** ಸಂಪುಟ–4 1800–1818. ಈ ಸಂಪುಟದಲ್ಲಿ ಲೇಖಕರು ಲಿಂಗಾಯತ ಸಮುದಾಯದ ಜನರ ಜೀವನ ಕ್ರಮವನ್ನು ವಿವರಿಸುತ್ತಾರೆ. ಲಿಂಗಾಯತ ಸಿದ್ಧಾಂತದ ಇತಿಹಾಸವನ್ನು ಸಂಕ್ಷಿಪ್ತವಾಗಿ ತಿಳಿಸುತ್ತಾ ಲಿಂಗಾಯತ ಧಾರ್ಮಿಕ ಆಚರಣೆಗಳು ಸಮಾರಂಭಗಳ ಬಗೆಗೆ ವಿವರಿಸಿದ್ದಾರೆ. ಈ ಗ್ರಂಥವು ಲಿಂಗಾಯತರ ವಿಶಿಷ್ಟ ಬಗೆಗಳನ್ನು ತಿಳಿಸುವುದಲ್ಲದೇ ಸಾಂಸ್ಕೃತಿಕ ಮಹತ್ವವನ್ನು ಬಿಚ್ಚಿಡುತ್ತದೆ.

**ಒಡೆಯರ್.ಎಸ್.ಎಸ್. 'ಶ್ರೀ ಬಸವೇಶ್ವರ ಸ್ಮರಣ ಸಂಚಿಕೆ'** 1967. ಮೈಸೂರು ಸರ್ಕಾರ. ಈ ಕೃತಿಯು ಬಸವಣ್ಣನವರ ಬದುಕು ಮತ್ತು ಉದ್ದೇಶಗಳ ವಿವಿಧ ಆಯಾಮಗಳನ್ನೊಳಗೊಂಡ ಪಾಂಡಿತ್ಯಪೂರ್ಣ ದಾಖಲೆಯಾಗಿದೆ. ಬಸವಣ್ಣನವರ ಸಿದ್ಧಾಂತಗಳ ಬಗೆಗೆ ಹೆಚ್ಚಿನ ವಿವರಗಳನ್ನು ನೀಡುತ್ತದೆ.

**ಅಧ್ಯಯನದ ಉದ್ದೇಶಗಳು**

1. ತುಮಕೂರು ಜಿಲ್ಲೆಯಲ್ಲಿ ಲಿಂಗಾಯತ ಸಮುದಾಯವನ್ನು ಗುರುತಿಸಿ ಅದರ ಮೂಲ ಮತ್ತು ಬೆಳವಣಿಗೆಯನ್ನು ವಿವರಿಸುವುದು.
2. ಲಿಂಗಾಯತ ಸಮುದಾಯದ ಲಕ್ಷಣಗಳು ಸ್ವರೂಪ, ರಚನೆ, ವೈಶಿಷ್ಟ್ಯತೆಯನ್ನು ವಿವರಿಸುವುದು.
3. ಲಿಂಗಾಯತ ಸಮುದಾಯದಲ್ಲಿನ ಸಾಮಾಜಿಕ ಬದಲಾವಣೆಗಳನ್ನು, ಸಾಮಾಜಿಕ ಸಾಂಸ್ಕೃತಿಕ ಆಚರಣೆಗಳು, ವಿವಾಹ, ಕೌಟುಂಬಿಕ ಸ್ವರೂಪಗಳನ್ನು ವಿಶ್ಲೇಷಿಸುವುದು.
4. ಲಿಂಗಾಯತ ಸಮುದಾಯದ ಪದ್ಧತಿಗಳು, ನಿಯಮಗಳು ಮತ್ತು ಮೌಲ್ಯಗಳನ್ನು ವಿವರಿಸುವುದು.
5. ಒಂದು ಪ್ರಬಲ ವಿಶಿಷ್ಟ ಸಮುದಾಯ ಆಧುನಿಕತೆಯ ವಿಧಾನಗಳಿಗೆ ಹೇಗೆ ಸ್ಪಂದಿಸುತ್ತದೆ ಎನ್ನುವುದನ್ನು ಕಂಡುಕೊಳ್ಳುವುದು.

**ಅಧ್ಯಯನದ ವ್ಯಾಪ್ತಿ.**

ಕರ್ನಾಟಕದಲ್ಲಿ ಹಲವಾರು ಸಮುದಾಯಗಳಿದ್ದು, ಪ್ರತಿಯೊಂದು ಸಮುದಾಯವೂ ಮತ್ತೊಂದು ಸಮುದಾಯಕ್ಕಿಂತ ಭಿನ್ನವಾಗಿದೆ. ಕಾರಣ, ಯಾವುದೇ ಒಂದು ಸಮುದಾಯವು ತಮ್ಮದೇ ಆದ ಸಂಸ್ಕೃತಿ, ಆಚಾರ, ರೂಢಿ, ಸಂಪ್ರದಾಯ ವೃತ್ತಿಯನ್ನು ಪರಂಪರಾಗತವಾಗಿ ಪಾಲಿಸಿಕೊಂಡು ಬರುತ್ತಿವೆ. ಕರ್ನಾಟಕದಲ್ಲಿನ ಲಿಂಗಾಯತ ಸಮುದಾಯ ಸಂಖ್ಯಾಬಲ ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಮುಂದುವರೆದ ಸಮುದಾಯವಾಗಿದೆ. ಲಿಂಗಾಯತ ಸಮುದಾಯದವರನ್ನು ಕರ್ನಾಟಕದಾದ್ಯಂತ ಕಾಣಬುದಾಗಿದ್ದರೂ, ಪ್ರಸ್ತುತ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಈ ಸಮುದಾಯದ ಬದಲಾವಣೆಯನ್ನು ಸೂಕ್ಷ್ಮವಾಗಿ ತಿಳಿಯಲು ತುಮಕೂರು ಜಿಲ್ಲೆಯಲ್ಲಿನ ಲಿಂಗಾಯತ ಸಮುದಾಯದವರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.
ಪ್ರಸ್ತುತ ಅಧ್ಯಯನ ತುಮಕೂರು ಜಿಲ್ಲೆಯನ್ನು ತನ್ನ ವ್ಯಾಪ್ತಿಯನ್ನಾಗಿಸಿಕೊಂಡಿದೆ. ತುಮಕೂರು ಜಿಲ್ಲೆಯ ಹತ್ತು ತಾಲ್ಲೋಕುಗಳಾದ ತುಮಕೂರು, ಗುಬ್ಬಿ, ಚಿಕ್ಕನಾಯಕನಹಳ್ಳಿ, ತಿಪಟೂರು, ತುರುವೇಕೆರೆ, ಕುಣಿಗಲ್, ಕೊರಟಗೆರೆ, ಮಧುಗಿರಿ, ಪಾವಗಡ, ಶಿರಾ ತಾಲ್ಲೋಕುಗಳಲ್ಲಿಯೂ ಲಿಂಗಾಯತ ಸಮುದಾಯ ಪ್ರಮುಖವಾಗಿದೆ. ಲಿಂಗಾಯತ ಜನಸಂಖ್ಯೆಯು ಹತ್ತು ತಾಲ್ಲೋಕುಗಳಲ್ಲಿ ಹರಡಿದ್ದು, ಪ್ರತಿ ತಾಲ್ಲೋಕು ಕನಿಷ್ಠ 20000 ಮತ್ತು ಗರಿಷ್ಠ 50000 ಜನಸಂಖ್ಯೆಯನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯನ್ನು ಅಧ್ಯಯನ ವ್ಯಾಪ್ತಿಯಾಗಿ ಪರಿಗಣಿಸಲಾಗಿದೆ. ಇದರಿಂದ ಅಧ್ಯಯನಕ್ಕೆ ಹೆಚ್ಚಿನದಾದ ಅವಶ್ಯಕವಾದ ಮಾಹಿತಿಗಳು ದೊರೆಯಲಿದೆ.

**ಸಂಶೋಧನ ವಿಧಾನ:**

ಲಿಂಗಾಯತ ಸಮುದಾಯದ ಅಧ್ಯಯನಕ್ಕೆ ಬೇಕಾಗಿರುವ ಮಾಹಿತಿಯನ್ನು ಪಡೆದುಕೊಳ್ಳಲು ಹಾಗೂ ಸಾಮಾಜಿಕ ಬದಲಾವಣೆಗಳನ್ನು ತೆಗೆದುಕೊಳ್ಳಲು ತುಮಕೂರು ಜಿಲ್ಲೆಯಾದ್ಯಂತ ಪ್ರಾಥಮಿಕ ಮತ್ತು ಮಾಧ್ಯಮಿಕ ಮಾಹಿತಿಯನ್ನು ಸಂಗ್ರಹಣೆ ಮಾಡಿಕೊಳ್ಳುವುದು.
ಜಿಲ್ಲಾ ಕಛೇರಿಗಳ ಮಾಹಿತಿ, ಸರ್ಕಾರಿ ದಾಖಲೆಗಳು, ಐತಿಹಾಸಿಕ ದಾಖಲೆಗಳು, ಲೇಖನಗಳು, ಪತ್ರಗಳು, ದಿನಚರಿಗಳು, ಇವುಗಳ ಮೂಲಕ ಲಿಂಗಾಯತ ಸಮುದಾಯಕ್ಕೆ ಸಂಬಂಧಿಸಿದ ಮಾಧ್ಯಮಿಕ ಮಾಹಿತಿಯನ್ನು ಸಂಗ್ರಹಿಸುವುದು.

ಪ್ರಾಥಮಿಕ ಮಾಹಿತಿಯನ್ನು ಜಿಲ್ಲೆಯಾದ್ಯಂತ ಹತ್ತು ತಾಲ್ಲೋಕುಗಳಲ್ಲಿರುವ ಲಿಂಗಾಯತರನ್ನು ಭೇಟಿ ನೀಡಿ ಗುಬ್ಬಿ, ಚಿಕ್ಕನಾಯಕನಹಳ್ಳಿ, ತಿಪಟೂರು, ತುರುವೇಕೆರೆ, ಕುಣಿಗಲ್, ತುಮಕೂರು, ಕೊರಟಗೆರೆ, ಪಾವಗಡ, ಮಧುಗಿರಿ, ಈ ತಾಲ್ಲೋಕುಗಳಲ್ಲಿ ಕೆಲವು ಕುಟುಂಬಗಳ ಮಾಹಿತಿಯನ್ನು ಅನುಸೂಚಿಯ ಮೂಲಕ ಮಾಹಿತಿಯನ್ನು ಪಡೆದುಕೊಳ್ಳಲಾಗುತ್ತದೆ. ಸಂಗ್ರಹಣೆ ಮಾಡಿರುವ ಮಾಹಿತಿಯನ್ನು ವಿಶ್ಲೇಷಣೆ ಮಾಡಿ ಈ ಮೇಲ್ಕಂಡ ವಿಧಾನಗಳ ಮೂಲಕ ತುಮಕೂರು ಜಿಲ್ಲೆಯ ಲಿಂಗಾಯತ ಸಮುದಾಯದಲ್ಲಿನ ಸಾಮಾಜಿಕ ಬದಲಾವಣೆಯನ್ನು ತಿಳಿಯಲು ಸಹಾಯಕವಾಗಿದೆ.

**ಮಾಹಿತಿ ಸಂಗ್ರಹಣೆ**

ಮಾಧ್ಯಮಿಕ ಮಾಹಿತಿಯನ್ನು ಸೂಕ್ತ ಉಲ್ಲೇಖ, ಪುಸ್ತಕಗಳು, ಗ್ರಂಥಗಳು, ಸರ್ಕಾರಿ ದಾಖಲೆಗಳು ದಿನಪತ್ರಿಕೆಗಳ ಮೂಲಕ ಮತ್ತು ಅಂತರ್ಜಾಲ ಮಾಧ್ಯಮದಿಂದ ಪಡೆದುಕೊಳ್ಳುತ್ತೇನೆ.

ಪ್ರಾಥಮಿಕ ಮಾಹಿತಿಯನ್ನು ಅವಲೋಕನ, ಗುಂಪುಚರ್ಚೆ, ಸಂದರ್ಶನ ಅನುಸೂಚಿ ಇವುಗಳ ಮೂಲಕ ಮಾಹಿತಿ ಸಂಗ್ರಹಣೆ ಮಾಡಿ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಣೆ ಮಾಡಿ ಪಡೆದಿರುವ ಮಾಹಿತಿಯು ವೈಜ್ಞಾನಿಕವಾಗಿ ಈ ಅಧ್ಯಯನದ ವಿಷಯಕ್ಕೆ ಸೂಕ್ತವಾಗಿರುವಂತೆ ಮತ್ತು ಸಂಪೂರ್ಣ ತುಮಕೂರಿನ ಲಿಂಗಾಯತ ಸಮುದಾಯವನ್ನು ಪ್ರತಿನಿಧಿಸುವಂತಿರುವಂತೆ ಮಾಹಿತಿ ಸಂಗ್ರಹಣೆ ಮಾಡಬೇಕಾಗಿರುತ್ತದೆ.

**ಪರಾಮರ್ಶನ ಗ್ರಂಥಗಳು**

1. ಥರ್ಸ್ಟನ್ ಈ ಮೈಸೂರು ಟ್ರೈಬ್ಸ್ ಅಂಡ್ ಕಾಸ್ಟ್ಸ್ ಸಂಪುಟ–4 1800–1818.
2. ಡಾ.ನಂದಿಮಠ್.ಎಸ್.ಸಿ.– ವೀರಶೈವ ಸಿದ್ಧಾಂತ ಒಂದು ಕೈಪಿಡಿ. ಮೋತಿಲಾಲ್ ಬನಾರಸಿದಾಸ್ ಇವರಿಂದ ಪ್ರಕಟಿತ–1942.
3. ಆರ್.ಎಂ.ಮೆಕೈವರ್ ಮತ್ತು ಸಿ.ಹೆಚ್.ಫೇಜ್ 'ಸೊಸೈಟಿ' ಮ್ಯಾಕ್‌ಮಿಲನ್ ಮತ್ತು ಕಂಪನಿ ಲಿಮಿಟೆಡ್ ಲಂಡನ್ ರವರಿಂದ ಪ್ರಕಟಿತ–1957.
4. ಡಾ.ಎಂ.ಎನ್.ಶ್ರೀನಿವಾಸ್– ಸೋಷಿಯಲ್ ಚೇಂಜ್ ಇನ್ ಮಾಡ್ರನ್ ಇಂಡಿಯಾ ಅಲೈಡ್ ಪಬ್ಲಿಕೇಷನ್ ರವರಿಂದ ಪ್ರಕಟಿತ–1966.
5. ಒಡೆಯರ್.ಎಸ್.ಎಸ್.–ಶ್ರೀ ಬಸವೇಶ್ವರ ಸ್ಮರಣ ಸಂಚಿಕೆ. 1967. ಮೈಸೂರು ಸರ್ಕಾರದಿಂದ ಪ್ರಕಟಿತ : ಬೆಂಗಳೂರು.
6. ಎಂ.ಆರ್.ಸಾಖರೆ – ಲಿಂಗಾಯತ ತತ್ವ ಮತ್ತು ಇತಿಹಾಸ, ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ಇವರಿಂದ ಪ್ರಕಟಿತ 1978.
7. ಪ್ರೊ.ಮಾಳವಾಡ್.ಎಸ್.ಎಸ್.– ವೀರಶೈವ ಸಿದ್ಧಾಂತ ಮತ್ತು ವಚನಕಾರರು, ಬಸವಸಮಿತಿ ಬೆಂಗಳೂರು ಇವರಿಂದ ಪ್ರಕಟಿತ 1980.
8. ಡಾ.ಎಂ.ಚಿದಾನಂದಮೂರ್ತಿ. – ಲಿಂಗಾಯತ ಅಧ್ಯಯನಗಳು ವಾಗ್ದೇವಿ ಪುಸ್ತಕಗಳು ಇವರಿಂದ ಪ್ರಕಟಿತ–1986.
9. ಟಿ.ಬಿ.ಬಾಟಮೋರ್ – ಸೋಸಿಯಾಲಜಿ – ಬ್ಲ್ಯಾಕಿ ಅಂಡ್ ಸನ್ ಲಿಮಿಟೆಡ್ 1986.
10. ಡಿ.ಆರ್.ಸಚ್‌ದೇವ್ ಮತ್ತು ವಿದ್ಯಾಭೂಷಣ್– ಇಂಟ್ರಡಕ್ಷನ್.ಟು.ಸೊಷಿಯಾಲಜಿ. ಕಿತಾಬ್ ಮಹಲ್ ಪ್ರಕಟಿತ–2005
11. ಲಿಂಗಾಯತಿಸಮ್ ವಿಕಿಪೀಡಿಯ – ದಿ ಫ್ರೀ ಎನ್‌ಸೈಕ್ಲೋಪೀಡಿಯಾ